# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 13.08.2011**

## ***ಪಾಲಿಕೆ ಆಯುಕ್ತರ ತಪಾಸಣೆ***

ಮರಗಳ ಸುತ್ತಲು ಪಾತಿ ನಿರ್ಮಿಸುವ, ಮಳೆ ನೀರು ಸಂಗ್ರಹಣೆ ಘಟಕ, ಸಸಿಗಳನ್ನು ನೆಡುವ, ರಸ್ತೆ ಗುಂಡಿಗಳನ್ನು ಮುಚ್ಚುವ ಮತ್ತು ರಸ್ತೆ ಬದಿ ಮೋರಿಗಳಿಂದ ಹೂಳೆತ್ತುವ ಕಾಮಗಾರಿಗಳನ್ನು ಪರಿಣಾಮಕಾರಿಯಾಗಿ ಮತ್ತು ತ್ವರಿತಗತಿಯಲ್ಲಿ ನಿರ್ಮಿಸುವ ಅಭಿಯಂತರುಗಳಿಗೆ ಪ್ರೋತ್ಸಾಹ ಧನ ನೀಡಲಾಗುವದೆಂದು ಪಾಲಿಕೆಯ ಆಯುಕ್ತರಾದ ಶ್ರೀ ಸಿದ್ದಯ್ಯಾ ರವರು ತಿಳಿಸಿದ್ದಾರೆ.

ಇಂದು ಬಿಬಿಎಂಪಿಯ ಸರ್ ಸಿ.ವಿ.ರಾಮನನಗರ ಉಪವಿಭಾಗದಲ್ಲಿ ತಪಾಸಣೆ ಕೈಗೊಂಡು, ಕಸ್ತೂರಿನಗರ, ದಯಾನಂದನಗರ, ಕೃಷ್ಣಯ್ಯನಪಾಳ್ಯ ಮತ್ತು ಬೆನ್ನಿಗಾನಹಳ್ಳಿ ಮುಂತಾದ ಕಡೆ ರಸ್ತೆ ಬದಿ ಮರಗಳ ರಕ್ಷಣೆಗಾಗಿ ಮಳೆಗಾಲದಲ್ಲಿ ಹೆಚ್ಚಿನ ನೀರು ಪೂರೈಕೆಯಾಗುವಂತೆ ಸುತ್ತಲು ಪಾತಿ ನಿರ್ಮಿಸುವ ಮತ್ತು ಉದ್ಯಾನವನಗಳಲ್ಲಿ ಮಳೆ ನೀರಿನ ಸಂಗ್ರಹಣೆಗಾಗಿ ನಿರ್ಮಿಸಿದ ಘಟಕಗಳ ಪರಿಶೀಲನೆ ನಡೆಸಿದರು. ಈ ಉಪವಿಭಾಗದಲ್ಲಿ ಎರಡೂ ಕಾಮಗಾರಿಗಳನ್ನು ಉತ್ತಮ ರೀತಿಯಲ್ಲಿ ನಿರ್ವಹಿಸಿದ್ದರಿಂದ ಮೆಚ್ಚುಗೆ ವ್ಯಕ್ತಪಡಿಸಿದರು.

ಪ್ರತಿಯೊಂದು ಆಟದ ಮೈದಾನ, ಉದ್ಯಾನವನ ಮತ್ತು ಖಾಲಿ ಇರುವ ಸ್ಥಳಗಳಲ್ಲಿ ತಪ್ಪದೇ ಮಳೆ ನೀರು ಸಂಗ್ರಹಣೆ ಘಟಕ ಮತ್ತು ಸಸಿ ನೆಡುವ ಕಾರ್ಯ ಕೈಗೊಳ್ಳುವಂತೆ ಕಾರ್ಯಪಾಲಕ ಅಭಿಯಂತರಿಗೆ ಸೂಚಿಸಿದರು.

ತಪಾಸಣೆ ಸಮಯದಲ್ಲಿ ಕಸ್ತೂರಿನಗರದಲ್ಲಿ ರಸ್ತೆ ಬದಿ ಮರದ ಸುತ್ತಲು ನಿರ್ಮಿಸಿದ ಪಾತಿಯೊಳಗೆ ಪ್ಲಾಸ್ಟಿಕ ಮತ್ತುಇತರೆ ವಸ್ತುಗಳನ್ನು ತುಂಬಿ ನೀರು ಸಂಗ್ರಹಣೆಯಾಗದಂತೆ ತಡೆಗಟ್ಟಿದಕ್ಕಾಗಿ ನೀಲಗಿರಿ ಬೇಕರಿ ಮಾಲೀಕರಿಗೆ 25,000 ರೂ. ದಂಡ ವಿಧಿಸಲು ಸೂಚಿಸಿದರು.

ಈಗಾಗಲೇ ಸೂಚಿಸಿರುವಂತೆ ಒಂದು ಎಕರೆ ಪ್ರದೇಶಗಿಂತ ಹೆಚ್ಚಿನ ಪ್ರದೇಶ ಹೊಂದಿರುವ ಶಿಕ್ಷಣ ಸಂಸ್ಥೆ ಮತ್ತು ಖಾಸಗಿ ವ್ಯಕ್ತಿಗಳನ್ನು ವೈಯಕ್ತಿಕವಾಗಿ ಸಂಪರ್ಕಿಸಿ ಅವರ ಆವರಣಗಳಲ್ಲಿ ಮಳೆ ನೀರಿನ ಸಂಗ್ರಹಣೆ ಘಟಕಗಳನ್ನು ಸ್ಥಾಪಿಸುವಂತೆ ಒತ್ತಾಯಿಸಲು ವಲಯ ಜಂಟಿ ಆಯುಕ್ತರಿಗೆ ತಿಳಿಸಿದರು.

ಆಯುಕ್ತರು ಎಂ.ಇ.ಜಿ. ಸೇನಾಪಡೆಯ ಕಮಾಂಡಂಟ್ ರವರನ್ನು ಭೇಟಿಯಾಗಿ ಅವರಿಗೆ ಸೇರಿದ 600 ಎಕರೆ ಪ್ರದೇಶದಲ್ಲಿ ಸುಮಾರು 6000 ಸಸಿಗಳನ್ನು ನೆಡಲು ಮನವಿ ಮಾಡಿದರು. ಎಲ್ಲಾ ಸಸಿಗಳನ್ನು ಪಾಲಿಕೆಯಿಂದ ಒದಗಿಸಲಾಗುವದೆಂದು ತಿಳಿಸಿದರು. ಕಮಾಂಡಂಟ್ ರವರು ಇದಕ್ಕೆ ಒಪ್ಪಿಗೆ ಸೂಚಸಿ ಪಾಲಿಕೆಯೊಂದಿಗೆ ಸಹಕರಿಸುವದಾಗಿ ತಿಳಿಸಿದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** ದಿನಾಂಕ: 13.08.2011

ಸ್ವಾತಂತ್ರೋತ್ಸವದ ದಿನಾಚರಣೆಯ ಅಂಗವಾಗಿ ಸಾರ್ವಜನಿಕರು ಪ್ಲಾಸ್ಟಿಕ್‌ನಿಂದ ಸಿದ್ದಪಡಿಸಿದ ರಾಷ್ಟ್ರಧ್ವಜಗಳನ್ನು ಬಳಸುವುದು ಮತ್ತು ಜಂಕ್ಷನ್‌ಗಳಲ್ಲಿ ಮಾರಾಟ ಮಾಡುತ್ತಿರುವುದು ಕಂಡು ಬಂದಿರುವ ಹಿನ್ನಲೆಯಲ್ಲಿ ಉಪ ಮಹಾಪೌರರಾದ ಶ್ರೀ ಎಸ್. ಹರೀಶ್ ರವರು ಸಾರ್ವಜನಿಕರಲ್ಲಿ ಮನವಿ ಮಾಡಿ, ಪ್ಲಾಸ್ಟಿಕ್ ರಾಷ್ಟ್ರಧ್ವಜಗಳನ್ನು ಮಾರಾಟ ಮಾಡುವುದು ನಿಷೇಧಿಸಿರುವುದರಿಂದ ಅವುಗಳನ್ನು ಬಳಸದಿರಲು ಮತ್ತು ಬಟ್ಟೆಯಿಂದ ಸಿದ್ದಪಡಿಸಿದ ಧ್ವಜಗಳನ್ನು ಉಪಯೋಗಿಸಲು ತಿಳಿಸಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**